ಶಾಲೆಗಳಲ್ಲಿ ಈ ರೀತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಆ ಯೋಜನೆಯನ್ನೂ ಅಳವಡಿಸಿಕೊಳ್ಳುವುದಕ್ಕೆ ಎಲ್ಲರ ಸಹಕಾರ ಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮಹಿಳಾ ಪದವಿ ಪೂರ್ವ ಕಾಲೇಜು ಕಟ್ಟಡ

33 (151) **ಶ್ರೀ ಪ್ರತಾಪ ಗೌಡ ಪಾಟೀಲ್ (ಮಸ್ಕಿ)** :– ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ–

(ಅ) ಮಸ್ಕಿಯ ಮಹಿಳಾ ಪದವಿ ಪೂರ್ವ ಕಾಲೇಜು ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :–

(ಅ) ಮಸ್ಕಿಯ ಮಹಿಳಾ ಪದವಿ ಪೂರ್ವ ಕಾಲೇಜು 2006–07ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಸದ್ಯಕ್ಕೆ ಸದರಿ ಕಾಲೇಜು ಪ್ರೌಢಶಾಲಾ ಕಟ್ಟಡದಲ್ಲಿ ನಡೆಯುತ್ತಿರುತ್ತದೆ. ಸದರಿ ಕಾಲೇಜಿನಲ್ಲಿ ಪ್ರಥಮ ವರ್ಷದಲ್ಲಿ 95 ವಿದ್ಯಾರ್ಥಿನಿಯರು, ದ್ವಿತೀಯ ವರ್ಷದಲ್ಲಿ 76 ವಿದ್ಯಾರ್ಥಿನಿಯರು ದಾಖಲಾತಿ ಹೊಂದಿರುತ್ತಾರೆ. ಈ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್–12ರಡಿ 36.00 ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದೆ. ನಿವೇಶನ ಲಭ್ಯವಿಲ್ಲದೇ ಇದ್ದುದರಿಂದ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಿರಲಿಲ್ಲ. ಈಗ ಪ್ರೌಢಶಾಲಾ ಆವರಣದಲ್ಲಿ ಕಟ್ಟಡವನ್ನು ನಿರ್ಮಿಸಲು ಆದೇಶಿಸಲಾಗಿದೆ.

ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಮಸ್ಕಿ ಮಹಿಳಾ ಪದವಿಪೂರ್ವ ಕಾಲೇಜು ಕಟ್ಟಡವು ನವೆಂಬರ್‌ನಲ್ಲಿ 29 ಲಕ್ಷ ರೂಪಾಯಿಗಳಿಗೆ ಟೆಂಡರ್ ಕರೆದಿದ್ದು, ಇದು ಫೆಬ್ರವರಿಯಲ್ಲಿ 26 ಲಕ್ಷ ರೂಪಾಯಿಗಳಿಗೆ ಅಂದರೆ, 26 ಪರ್ಸೆಂಟ್ ಲೆಸ್ ಆಗಿ ಟೆಂಡರ್ ತೆಗೆದುಕೊಂಡು 26 ಲಕ್ಷ ರೂಪಾಯಿಗಳಿಗೆ ಅಗ್ರಿಮೆಂಟ್ ಮಾಡಿದ್ದಾರೆ. ಆದರೆ, ಇದುವರೆಗೆ ಕೆಲಸ ಪ್ರಾರಂಭಿಸಿಲ್ಲ. ಇದಕ್ಕೆ ಅವರು ಕೊಟ್ಟಿರುವ ಕಾರಣವೇನೆಂದರೆ, ನಿವೇಶನ ಲಭ್ಯವಿಲ್ಲವೆಂದು ಹೇಳಿರುವುದು. ಇದು ಸುಳ್ಳು, ಕಾರಣ, ಈಗ ಕಡಿಮೆ ಟೆಂಡರ್ ಕೋಟ್ ಮಾಡಿರುವುದರಿಂದ ಅವರು ಈ ನೆಪವೊಡ್ಡಿ ಹೆಚ್ಚಿನ ಅಗ್ರಿಮೆಂಟ್‌ಗೆ ಒತ್ತಾಯಿಸುತ್ತಾ ಕ್ಲಾಜ್ 15ರಡಿಯಲ್ಲಿ ಹೆಚ್ಚಿನ

ಟೆಂಡರ್‌ಗೆ ಅನುದಾನ ಹೆಚ್ಚಿಸಬೇಕೆಂದು ಕೇಳಿದ್ದಾರೆ. ಏಕೆಂದರೆ, ಅಲ್ಲಿ ಮುಂಚೆಯೇ ತೋರಿಸಿದ್ದ ನಿವೇಶನ ಇತ್ತು. ಆ ಕಂಟ್ರಾಕ್ಟರ್‌ಗೆ ತಕ್ಷಣದಲ್ಲೇ ಕೆಲಸ ಪ್ರಾರಂಭಿಸಲು ಆದೇಶಿಸಬೇಕು. ಇಲ್ಲದಿದ್ದಲ್ಲಿ, ಕೆಲಸ ಮಾಡಲು ಮರು ಟೆಂಡರ್ ಕರೆಯಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಪ್ರತಾಪಗೌಡ ಪಾಟೀಲರು ಮಸ್ಕಿ ಮಹಿಳಾ ಪದವಿಪೂರ್ವ ಕಾಲೇಜು ಕಟ್ಟಡವನ್ನು ಮಂಜೂರು ಮಾಡಿಕೊಟ್ಟಿದ್ದರೂ ಅಲ್ಲಿ ಕಟ್ಟಡ ಕಟ್ಟುವುದಕ್ಕೆ ವಿಳಂಬವಾಗುತ್ತಿರುವ ಬಗ್ಗೆ ಅಲ್ಲಿನ ಗುತ್ತಿಗೆದಾರರ ಮತ್ತು ಸ್ಥಳದ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಾವು ಈಗಾಗಲೇ ನಬಾರ್ಡ್ ಯೋಜನೆಯ ಆರ್‌ಐಡಿಎಫ್–12ರಡಿಯಲ್ಲಿ ಟೆಂಡರ್ ಕರೆದು ಕೆಲಸ ಕೊಟ್ಟು ಸ್ಥಳದ ತೊಡಕು ಇದ್ದ ಕಾರಣದಿಂದಾಗಿ ಕಟ್ಟಡದ ಕೆಲಸ ನಿರ್ಮಾಣವಾಗಿರಲಿಲ್ಲ. ಆದರೆ, ನಾನು ಈಗಾಗಲೇ ನಮ್ಮ ಅಧಿಕಾರಿಗಳೊಂದಿಗೆ ಸವಿಸ್ತಾರವಾಗಿ ಮಾತನಾಡಿ ಇದಕ್ಕೆ ಅಲ್ಲಿಯ ಪ್ರೌಢಶಾಲಾ ಕಟ್ಟಡದ ಜಾಗ ಏನಿದೆ, ಆ ಸ್ಥಳದಲ್ಲೇ ಕಟ್ಟಬೇಕೆಂದು ಏನು ಗುರುತು ಮಾಡಿದ್ದಾರೆ, ಅಲ್ಲಿ ಕಟ್ಟುವುದಕ್ಕೆ ಬೇಕಾಗಿರತಕ್ಕಂಥ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದೇನೆ ಮತ್ತು ಅಲ್ಲಿ ಸ್ಥಳೀಯರ ಜೊತೆಯಲ್ಲಿ ಮಾನ್ಯ ಶಾಸಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹೈಸ್ಕೂಲು ಜಾಗದಲ್ಲಿ ಕಟ್ಟಡ ಕಟ್ಟುವುದಕ್ಕೆ ಎಸ್‌ಡಿಎಂಸಿಯವರ ಸಹಕಾರ ಬೇಕೆಂದು ಕೇಳುತ್ತಿದ್ದೇವೆ. ಏಕೆಂದರೆ, ಇದಕ್ಕೆ ಅವರ ಒಪ್ಪಿಗೆ ಬೇಕಾಗುತ್ತದೆ. ಆದರೆ, ಅವರ ಒಪ್ಪಿಗೆ ಪಡೆದು, ಸೌಹಾರ್ದಯುತ ಹಿನ್ನೆಲೆಯಲ್ಲಿ, ವಿಶ್ವಾಸದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗಿದೆ. ಹಾಗಾಗಿ, ನಾನು ಮತ್ತು ನಮ್ಮ ಪ್ರತಾಪಗೌಡ ಪಾಟೀಲರು ಈ ವಿಷಯದಲ್ಲಿ ಸ್ಥಳೀಯವಾಗಿ ಗುತ್ತಿಗೆದಾರರು ಇದ್ದರೆ, ಏನು ತೊಂದರೆ ಇದೆ, ಸರ್ಕಾರದ ನಿಯಮದಂತೆ ಅವರು ಕಟ್ಟಡವನ್ನು ಕಟ್ಟಬೇಕಾಗುತ್ತದೆ. ಆದರೆ, ಎಸ್‌ಡಿಎಂಸಿಯವರ ಒಪ್ಪಿಗೆ ಪಡೆದು ಅದೇ ಸ್ಥಳದಲ್ಲಿ ಕಟ್ಟಡ ಕಟ್ಟುವುದಕ್ಕೆ ಅಗತ್ಯವಿರುವ ಕ್ರಮ ತೆಗೆದುಕೊಳ್ಳುತ್ತೇವೆ.

ಜೆ.ಓ.ಸಿ. ಶಿಕ್ಷಣದ ಉಪಕರಣಗಳನ್ನು ಒದಗಿಸುವುದು

34(148) **ಶ್ರೀ ಶ್ರೀನಿವಾಸ ಎಂ. (ಮಂಡ್ಯ):–** ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿನ ಜೆ.ಓ.ಸಿ. ಕೋರ್ಸುಗಳು